ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ.27.ಪಘಯೋ. 12

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,ಸಚಿವಾಲಯ-2,
ಬೆಂಗಳೂರು,ದಿನಾಂಕ.09 -10-2012

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್,
ಬೆಳಗಾಂ/ ಚಿಕ್ಕಮಗಳೂರು/ಚಾಮರಾಜನಗರ/
ಧಾರವಾಡ/ದಕ್ಷಿಣ ಕನ್ನಡ/ಹಾಸನ/ಕೊಡಗು/
ಮೈಸೂರು/ಶಿವಮೊಗ್ಗ/ಉಡುಪಿ ಮತ್ತು ಉತ್ತರ ಕನ್ನಡ

ಮಾನ್ಯರೇ,

ವಿಷಯ:- ಯೋಜನಾ ಆಯೋಗಕ್ಕೆ ಆಧಾರ್ ಗುರುತಿನ ಸಂಖ್ಯೆಯೊಂದಿಗೆ WGDP ವೈಯುಕ್ತಿಕ ಫಲಾನುಭವಿಗಳ ವಿವರಗಳನ್ನು ಅಳವಡಿಸುವ ಕುರಿತು.

ಉಲ್ಲೇಖ:-ಕೇಂದ್ರ ಸರ್ಕಾರದ ಯೋಜನಾ ಆಯೋಗದ ಪತ್ರ ಸಂ.M-13099/7/2012-MLP ದಿನಾಂಕ:24.09.2012.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಕೇಂದ್ರ ಸರ್ಕಾರದ ಯೋಜನಾ ಆಯೋಗದ ಸ್ವಯಂವೇದ್ಯದ ಪ್ರತಿ ಮತ್ತು ನಿಗದಿತ ಪ್ರಪತ್ರಗಳನ್ನು ಅಡಕ ಮಾಡಿದೆ. ಕೇಂದ್ರ ಸರ್ಕಾರದ ಯೋಜನಾ ಆಯೋಗ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೂ ಸಹ ಈ ಒಂದು ಹೊಸ ಪ್ರಯತ್ನವನ್ನು ವಿಸ್ತರಿಸಲು ಯೋಜಿಸಿ, ರಾಜ್ಯ ಸರ್ಕಾರಕ್ಕೆ ಸದರಿ ಯೋಜನೆಯಡಿ, ವೈಯುಕ್ತಿಕ ಸೌಲಭ್ಯ ನೀಡಲು ಆಧಾರ್ ಸಂಖ್ಯೆಯನ್ನು ಗಣನೆಗೆ ತೆಗೆದು ಕೊಂಡು, ಸಂಖ್ಯೆಯ ಆಧಾರದ ಮೇರೆಗೆ ಜೀವನೋಪಾಯ ಚಟುವಟಿಕೆಗಳಿಗೆ ಆಯ್ಕೆ ಮಾಡಲು ತಿಳಿಸಿದೆ. ಕೇಂದ್ರ ಸರ್ಕಾರಕ್ಕೆ ಪ್ರತೀ ಮಾಹೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ಆವರಿಸಲ್ಪಟ್ಟಿರುವ ವೈಯುಕ್ತಿಕ ಫಲಾನುಭವಿಗಳ ಸಮಗ್ರ ವಿವರಗಳನ್ನು ಆಧಾರ್ ಗುರುತಿನ ಸಂಖ್ಯೆಯೊಂದಿಗೆ ಅಳವಡಿಸಿರುವ ಕುರಿತು ಪ್ರಗತಿ ವರದಿ ಮಾಡಬೇಕಾಗಿದೆ.

ಆದುದರಿಂದ, ನಿಗದಿತ ಪ್ರಪತ್ರದಲ್ಲಿ ಪ್ರತೀ ಮಾಹೆ ದಿನಾಂಕ 5ರೊಳಗೆ ಸರ್ಕಾರಕ್ಕೆ ನಿರೀಕ್ಷಿತ ಮಾಹಿತಿ ಸಂಕಲನ ಮಾಡಿ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಸಹಿ:

(ಎಂ.ದೀಪಾ)

ನಿರ್ದೇಶಕರು(ಗ್ರಾಮೂಸೌ-II)

ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ